Phone : 08282-256465
Mobile No : 9448244273
Email : kuvempuprasaranga@gmail.com

ಕುವೆಂಪು ವಿಶ್ವವಿದ್ಯಾಲಯ
**ಪ್ರಸಾರಾಂಗ**
ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451

Fax 08282-256262
Website: www.kuvempu.ac.in

ಸಂಖ್ಯೆ:ಕುವಿ:ಪ್ರಸಾರಾಂಗ:03/2021/

ದಿನಾಂಕ:16-07-2021

# ಅಧಿಕೃತ ಜ್ಞಾಪನಾ

ವಿಷಯ : ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಪ್ರಕಟವಾಗುವ ಅನುವಾದಿತ ಪುಸ್ತಕ/ಕೃತಿಗಳಿಗೆ ವಿವಿಧ ಸ್ತರದ ಅನುವಾದದ ದರಗಳನ್ನು ನಿಗದಿಪಡಿಸುವ ಕುರಿತು.

ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 03-05-2021

---

**ಪ್ರಸ್ತಾವನೆ:**

ಕುವೆಂಪು ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಪ್ರಕಟವಾಗುವ ವಿವಿಧ ರೀತಿಯ ಪುಸ್ತಕ / ಕೃತಿಗಳಲ್ಲಿ ಅನುವಾದನಾ ಪುಸ್ತಕ/ಕೃತಿಗಳಿಗೆ, ಅವುಗಳ ಅನುವಾದದ ಪ್ರಕ್ರಿಯೆಯ ವಿವಿಧ ಹಂತಗಳ ಅನುವಾದನಾ ಕಾರ್ಯಗಳಿಗೆ ಸೂಕ್ತ ದರಗಳನ್ನು ನಿಗದಿಪಡಿಸುವ ಅವಶ್ಯಕತೆವಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಕೆಲವು ಹಂತಗಳನ್ನು ಗುರುತಿಸಿ ಅವುಗಳಿಗೆ ಸೂಕ್ತ ಕಂಡ ದರಗಳನ್ನು ನಿಗದಿಪಡಿಸಲಾಗಿದೆ.

| ಕ್ರ ಸಂ. | ಪುಸ್ತಕ/ಕೃತಿಗಳ ಅನುವಾದ ಪ್ರಕ್ರಿಯೆ ವಿವಿಧ ಹಂತಗಳ ವಿವರ | ನಿಗದಿಪಡಿಸಲಾದ ದರಗಳು ರೂ. |
|---|---|---|
| 01 | **ಅನುವಾದ ಪ್ರಕ್ರಿಯೆಯಲ್ಲಿ ಗದ್ಯ ರೂಪದ ಪುಸ್ತಕ/ಕೃತಿಯನ್ನು ಪುಸ್ತಕ/ಕೃತಿಯನ್ನು ಗಣೀಕರಣದ ಲೆಕ್ಕಾಚಾರಕ್ಕೆ ಒಳಪಡಿಸಿದಂತೆ ಲಭ್ಯವಾಗುವ ಫಲಿತಾಂಶಕ್ಕೆ ಒಳಪಟ್ಟಿರುತ್ತದೆ**<br>ಎ) ಗದ್ಯ ಅನುವಾದ ಕಾರ್ಯಕ್ಕೆ ಮೂಲ ಗದ್ಯದ 1000 ಶಬ್ದಗಳಿಗೆ<br>ಬಿ) ಗದ್ಯದ ಸಂಗ್ರಹಾನುವಾದದ ಕಾರ್ಯಕ್ಕೆ ಅನುವಾದಿತಗೊಂಡ ಭಾಷೆಯ ಗದ್ಯದ 1000 ಶಬ್ದಗಳಿಗೆ (Target Language)<br>ಸಿ) **ಕೋಶ**, ನಿಘಂಟುಗಳ ಅನುವಾದ ಕಾರ್ಯಕ್ಕೆ ಮೂಲ ಪಠ್ಯದ 1000 ಶಬ್ದಗಳಿಗೆ ಅಥವಾ ಅನುವಾದಿತಗೊಂಡ ಭಾಷೆಯ ಗದ್ಯದ 1000 ಶಬ್ದಗಳಿಗೆ (Target Language) | 750-00<br>750-00<br>750-00 |
| 02 | **ಮೂಲ ಪದ್ಯದ ಅನುವಾದಕ್ಕೆ** (ಒಂದು ಸಾಲಿಗೆ 3 ರಿಂದ 5 ಶಬ್ದಗಳಂತೆ)<br>ಎ) ಕನಿಷ್ಠ 15 ಸಾಲುಗಳ ಸಣ್ಣ ಪದ್ಯಕ್ಕೆ<br>ಬಿ) 15 ಸಾಲುಗಳಿಗಿಂತ ಹೆಚ್ಚಿರುವ ದೊಡ್ಡ ಪದ್ಯಕ್ಕೆ | ಕನಿಷ್ಠ 500-00<br>ಗರಿಷ್ಠ 1,000-00<br>ಗರಿಷ್ಠ 2,000-00 |
| 03 | **1.5 ಲೈನ್ ಸ್ಪೇಸ್‌ನಲ್ಲಿ ಎ4 ಅಳತೆಯ ಪುಸ್ತಕದ ಹಸ್ತಪ್ರತಿ/ಲೇಖನಗಳ ಅಚ್ಚಾದ ಪುಟವೊಂದಕ್ಕೆ ರೂ.15/-ರಂತೆ** ಪರಿಶೀಲಕರಿಗೆ | |
| 04 | ಇಂಡೆಕ್ಸ್ ಸಿದ್ಧತೆಗೆ ಪ್ರತಿ ಪುಟಕ್ಕೆ – ಅಚ್ಚಾದ ಪುಟವೊಂದಕ್ಕೆ | 25-00 |
| 05 | **1.5 ಲೈನ್ ಸ್ಪೇಸ್‌ನಲ್ಲಿ ಎ4 ಅಳತೆಯಲ್ಲಿನ ಲೇಖನಗಳ ಬರಹಗಾರರಿಗೆ** (1/8 ಡೆಮ್ಮಿ ಪುಟ ಒಂದಕ್ಕೆ) | 300-00 |
| 06 | **ಲೇಖನಗಳ ಬರಹಗಾರರಿಗೆ /ಅನುವಾದಕರಿಗೆ ಹಸ್ತಪ್ರತಿ ಸಿದ್ಧತೆ ಮಾಡಲು ಇ-ಟೆಂಡರಿನಲ್ಲಿ ನಮೂದಿಸುವ ದರಗಳಂತೆ**<br>ಎ) ಡಿ.ಟಿ.ಪಿ ವೆಚ್ಚ ಎ4 ಅಳತೆಯ 12 ಫಾಂಟಿನ ಒಂದು ಪುಟಕ್ಕೆ<br>ಬಿ) ಡಿಟಿಪಿ ವೆಚ್ಚ 1/8 ಡೆಮ್ಮಿ ಅಳತೆಯ 12 ಫಾಂಟಿನ ಒಂದು ಪುಟಕ್ಕೆ | ರೂ. 25-00<br>ರೂ. 20-00 |
| 07 | **ಅನುವಾದ ಕಾರ್ಯದ ಸಂಬಂಧ ತಜ್ಞರಿಂದ ಕಾಪಿ ಎಡಿಟಿಂಗ್**<br>ಎ) 1/8 ಡೆಮ್ಮಿ ಅಳತೆಯ ಪ್ರತಿ ಪುಟವೊಂದಕ್ಕೆ<br>ಬಿ) 1/4 ಕ್ರೌನ್ ಅಳತೆಯ ಪ್ರತಿ ಪುಟವೊಂದಕ್ಕೆ | 25-00<br>50-00 |
| 08 | **ಅನುವಾದಿತ ಪಠ್ಯದ (ಗದ್ಯ/ಪದ್ಯ) ಪರಿಷ್ಕರಣೆ**<br>ಎ) ಅಂತಿಮ ಪರಿಶೀಲನೆಯ ಪುಟವೊಂದಕ್ಕೆ 1/8 ಡೆಮ್ಮಿ / 1/8 ಕ್ರೌನ್<br>ಬಿ) ಅಂತಿಮ ಪರಿಶೀಲನೆಯ ಪುಟವೊಂದಕ್ಕೆ 1/4 ಕ್ರೌನ್ | 50-00<br>100-00 |
| 09 | **ಮುದ್ರಿತ ಪುಸ್ತಕದ ಮೂಲ ಲೇಖಕರಿಗೆ ಮತ್ತು ಪುಸ್ತಕದ ಅನುವಾದಕರಿಗೆ/ ಹಕ್ಕುದಾರರಿಗೆ ರಾಯಧನ** | ಪುಸ್ತಕದ ಪ್ರತಿಗಳ ಮುದ್ರಣದ ಮೇಲೆ ಮುಖಬೆಲೆಯ ತಲಾ ಶೇ.10% |
| 10 | **ಕೋಶಗಳು, ಚರಿತ್ರೆಯ ಸಂಪುಟಗಳು ಇಂತಹ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿ ಪುಸ್ತಕದ ಸಂಪಾದಕರುಗಳಿಗೆ ರಾಯಧನ** | ಪ್ರತಿ ಸಂಪುಟದ /ಪುಸ್ತಕದ ಮುಖಬೆಲೆಯ ಶೇ.15% |

ಮೇಲ್ಕಂಡ ದರಗಳನ್ವಯ ನಿಗದಿತ ಅನುವಾದ ಕಾರ್ಯಗಳಿಗೆ ಪಾವತಿಗೆ ಕ್ರಮಕೈಗೊಳ್ಳಲು ಹಾಗೂ ಸಂಬಂಧಿತ ವೆಚ್ಚಗಳನ್ನು ಪ್ರತಿ ಆರ್ಥಿಕ ವರ್ಷದಲ್ಲಿ ಅನುವಾದದ ಪಾವತಿಗಳ ವೆಚ್ಚಗಳನ್ನು, ಪರಿಷ್ಕರಣೆಯ ಅಗತ್ಯ ಕಂಡುಬಂದಲ್ಲಿ, ಪರಿಷ್ಕೃತ ದರಗಳಿಗೆ ಪ್ರಸಾರಾಂಗದ ಸಲಹಾ ಸಮಿತಿಯ ಒಪ್ಪಿಗೆ ಪಡೆದು, ವಿಶ್ವವಿದ್ಯಾಲಯ ಆಯವ್ಯಯದ **ಪ್ರಸಾರಾಂಗದ ಪ್ರಕಟಣೆಗಳು/ಅರಿವು ಕಾರ್ಯಕ್ರಮದ ಶೀರ್ಷಿಕೆಯಡಿ** ಭರಿಸಿ ಪಾವತಿಸಲು ಉಲ್ಲೇಖದಲ್ಲಿ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಕುವಿ:ಪ್ರಸಾರಾಂಗ:03/2021/ ದಿನಾಂಕ:16-07-2021**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ ಪ್ರತಿ ಆರ್ಥಿಕ ವರ್ಷದಲ್ಲಿ ಕುವೆಂಪು ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಪ್ರಕಟವಾಗುವ ವಿವಿಧ ರೀತಿಯ ಪುಸ್ತಕ/ಕೃತಿಗಳಲ್ಲಿ, ಅವುಗಳ ಅನುವಾದ ಪ್ರಕ್ರಿಯೆಯ ವಿವಿಧ ಹಂತಗಳ ಅನುವಾದನಾ ಕಾರ್ಯಗಳಿಗೆ ಮೇಲ್ಕಂಡ ಪ್ರಸ್ತಾವನೆಯಲ್ಲಿ ನಮೂದಿಸಲಾದ ದರಗಳನ್ವಯ, ಅನುವಾದದ ವೆಚ್ಚಗಳನ್ನು, ಸದರಿ ದರದಲ್ಲೇ ಅಥವಾ ಪ್ರಸಾರಾಂಗದ ಸಲಹಾ ಸಮಿತಿಯ ಪರಿಷ್ಕೃತ ದರಗಳಂತೆ, ವಿಶ್ವವಿದ್ಯಾಲಯದ ಆಯವ್ಯಯದ **ಪ್ರಸಾರಾಂಗದ ಪ್ರಕಟಣೆಗಳು/ಅರಿವು ಕಾರ್ಯಕ್ರಮದ ಶೀರ್ಷಿಕೆಯಡಿ** ಭರಿಸಿ ಪಾವತಿಸಲು ಮಂಜೂರಾತಿಗಳನ್ನು ನೀಡಲಾಗಿದೆ.

ಕುಲಸಚಿವ
ಕುಲಸಚಿವ
ಕುವೆಂಪು ವಿಶ್ವವಿದ್ಯಾಲಯ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ, ಕರ್ನಾಟಕ.

ಗೆ,

1. ಕುಲಸಚಿವರು (ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ
2. ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ
3. ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ
4. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳಿಗೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
5. ಸಹ್ಯಾದ್ರಿ ವಿಜ್ಞಾನ/ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜುಗಳ ಪ್ರಾಚಾರ್ಯರುಗಳಿಗೆ, ಶಿವಮೊಗ್ಗ.
6. ಪ್ರಾಂಶುಪಾಲರು, ಯು.ಎಸ್.ಎಂ.ಆರ್. ಪ್ರಥಮ ದರ್ಜೆ ಕಾಲೇಜು, ಶಂಕರಘಟ್ಟ
7. ನಿರ್ದೇಶಕರು-ವಿದ್ಯಾರ್ಥಿ ಕ್ಷೇಮಪಾಲನೆ/ದೂರ ಶಿಕ್ಷಣ ನಿರ್ದೇಶನಾಲಯ/ಕಾಲೇಜು ಅಭಿವೃದ್ಧಿ ಪರಿಷತ್ತು/ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ/ಅಂಬೇಡ್ಕರ್ ಅಧ್ಯಯನ ಕೇಂದ್ರ, / ಯು.ಸಿ.ಸಿ.ಎಫ್ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
8. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ ಬಿ.ಹೆಚ್. ರಸ್ತೆ, ಕಡೂರು.
9. ಕಾರ್ಯಪಾಲಕ ಅಭಿಯಂತರರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
10. ಎಲ್ಲಾ ಉಪಕುಲಸಚಿವರಿಗೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
11. ಎಲ್ಲಾ ಸಹಾಯ ಕುಲಸಚಿವರು/ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
12. ಸಂಯೋಜನಾಧಿಕಾರಿಗಳು, ಐ.ಕ್ಯೂ.ಎ.ಸಿ/ಮಹಿಳಾ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
13. ಶಿಕ್ಷಕ ಸಲಹೆಗಾರರು, ಸ್ನಾತಕೋತ್ತರ ಪುರುಷರ:ಮಹಿಳಾ ವಿದ್ಯಾರ್ಥಿಗಳ ನಿಲಯ ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
14. ಕಾರ್ಯಕ್ರಮ ಸಂಯೋಜನಾಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನಾ ವಿಭಾಗ, ನಗರ ಕಛೇರಿ ಬೈಪಾಸ್ ರಸ್ತೆ, ಶಿವಮೊಗ್ಗ.
15. ಸಂಚಾಲಕರು, ಪರ್‍ಯೇತರ ಚಟುವಟಿಕೆ ವಿಭಾಗ, ಎಸ್.ಸಿ/ಎಸ್.ಟಿ. ಸೆಲ್/ ಒ.ಬಿ.ಸಿ./ಅಂಬೇಡ್ಕರ್ ಅಧ್ಯಯನ ಪೀಠ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
16. ಆಪ್ತ ಕಾರ್ಯಾಲಯ:ಕುಲಪತಿಗಳು, ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
17. ಕ್ಯೂರೇಟರ್, ಕೆಳದಿ ವಸ್ತು ಸಂಗ್ರಹಾಲಯ, ಕೆಳದಿ, ಸಾಗರ
18. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
19. ಕಛೇರಿ ಪ್ರತಿ